**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 742/2022**

| | | | |
|---|---|---|---|
| **ಹೆಸರು** | **:** | **ಜಗದೇವಿ** | **ಚಾ.ಸಾ.7** |
| **ಗಂಡನ ಹೆಸರು** | **:** | **ಜಗನ್ನಾಥ** | **ಪ್ರಾ.ಸಾ.3** |
| **ವಯಸ್ಸು** | **:** | **60 ವರ್ಷ** | **ದಿನಾಂಕಃ 18-10-2023** |
| **ಉದ್ಯೋಗ** | **:** | **ವ್ಯಾಪಾರ** | |
| **ವಾಸಸ್ಥಳ** | **:** | **ಗಡಿನಿಂಗದಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-1 ನನ್ನ ಮಗ. ಆರೋಪಿ ನನಗೆ ಗೊತ್ತು.

ಈಗ ಎರಡೂ-ವರೆ ವರ್ಷಗಳ ಹಿಂದೆ ಪ್ರಾಸಾ-1 ಮತ್ತು ಚಾಸಾ-2 ರವರು ಹೂವು ಮಾರಾಟ ಮಾಡಲು ಚಂದನಕೇರಾಗೆ ಹೋಗಿದ್ದರು. ಚಂದನಕೇರಾದಲ್ಲಿ ಆರೋಪಿ ಬಂದು ಪ್ರಾಸಾ-1 ರವರಿಗೆ ಹೊಡೆದಿದ್ದಾರೆ. ಭೀಮರಾಯ ಎಂಬ ವ್ಯಕ್ತಿ ನಾನು ಮನೆಯಲ್ಲಿ ಇದ್ದಾಗ ಆರೋಪಿ ಪ್ರಾಸಾ-1 ರವರಗೆ ಹೊಡೆದಿದ್ದಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ನಾನು, ನನ್ನ ಮಗಳು ಹಾಗೂ ನನ್ನ ಮಗ ಸೇರಿ ಬೀದರದಲ್ಲಿರುವ ಶ್ರೀ ಆಸ್ಪತ್ರೆಗೆ ಹೋಗಿ ನೋಡಿದಾಗ ಪ್ರಾಸಾ-1 ರವರ ಕತ್ತಿಗೆ ಗಾಯವಾಗಿತ್ತು ಮತ್ತು ಭುಜಕ್ಕೆ ಗಾಯವಾಗಿತ್ತು. ಪ್ರಾಸಾ-1 ರವರ ತಲೆಗೆ ಹೊಲಿಗೆ ಹಾಕಿದ್ದರು. ಪ್ರಾಸಾ-1 ರವರು ಜಗಳದ ಬಗ್ಗೆ ನನಗೆ ತಿಳಿಸಿರುವುದಿಲ್ಲ.

ಆರೋಪಿ ಸುಮ್ಮನೆ ಬಂದು ಯಾವದೇ ಕಾರಣ ಇಲ್ಲದೆ ಪ್ರಾಸಾ-1 ರವರಿಗೆ ಹೊಡೆದಿರುತ್ತಾನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತಿರುವ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಗ ಪ್ರಾಸಾ-1 ರವರಿಗೆ ಹೊಡೆದಿರುತ್ತಾನೆ. ಆರೋಪಿ ಪ್ರಾಸಾ-1 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾನೆ ಎಂದು ತಿಳಿಸಿರುತ್ತಾರೆ. ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸವಯ ಕೋರಿದ್ದರಿಂದ 200-00 ರೂ. ಖರ್ಚು ಕೊಡುವಂತೆ ಆದೇಶಿಸಿ ಸಮಯ ನೀಡಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**